ಸಿ.ಸಿ .ನಂ. 231/2023 ಪಿಡಬ್ಲೂಃ 1

ದಿನಾಂಕಃ 01-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಜೆ ಎನ್ ವಕೀಲರಿಂದಃ**

2. ನಾನು ಹೊನ್ನಾವರದಲ್ಲಿ ಐಟಿಐ ವರೆಗೂ ಓದಿದ್ದೇನೆ. ಈಗ ಸಾಗರದಲ್ಲಿ ರೇಲ್ವೆ ಇಲಾಖೆಲ್ಲಿ ಗೇಟ್ ಮೆನ್ ಆಗಿ ಕೆಲಸ ಮಾಡುತ್ತಿದ್ದೇನೆ. 11 ವರ್ಷಗಳಿಂದ ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಆಧಾರ ಕಾರ್ಡ ಹೆಗಡೆ ಅಡ್ರೆಸ್ ನಲ್ಲಿ ಇದೆ . ರೇಶನ್ ಕಾರ್ಡ ಸಾಗರದ ವಿಳಾಸ ನನ್ನ ಹೆಂಡತಿಯ ಹೆಸರಿನಲ್ಲಿದೆ. ಇಲೆಕ್ಷನ್ ಐಡಿ ಹೆಗಡೆ ವಿಳಾಸದಲ್ಲಿ ಇದೆ. ಮರ್ಸಾ, ಗುಡ್ಡೆಕೌತಿ, ಎಮ್ಮೆನ ಹಳ್ಳಿ , ಸಾಗರ ಈ ವಿಳಾಸದಲ್ಲಿ ವಾಸವಾಗಿದ್ದೇವೆ . ಹೆಗಡೆಯಿಂದ ಸಾಗರ 126 ಕಿಲೋಮೀಟರ್ ಆಗುತ್ತದೆ . ವಾರಕ್ಕೊಂದು ದಿನ ರಜೆ ಇರುತ್ತದೆ . ಬಾಕಿ ದಿನಗಳಲ್ಲಿ ಅಲ್ಲೇ ಇರುತ್ತೇನೆ ಎಂದರೆ ಸರಿ . ಯಾವ ದಿನ ರಜೆ ಇರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಯಾವ ದಿನ ರೆಸ್ಟ ಎಂದು ಕೊಡುತ್ತಾರೆ ಆ ದಿನ ರಜೆ ಇರುತ್ತದೆ . ನಾನು ಖಾಯಂವಾಗಿ ಸಾಗರದಲ್ಲೇ ವಾಸವಾಗಿರುವುದು ಎಂದರೆ ಸರಿ. ನಾನು ನೀಡಿದ ವಿಳಾಸದ ಪ್ರಕಾರ ಆರೋಪಿ ಕೂಡ ಸಾಗರದವರು ಎಂದರೆ ಸರಿ. ಆರೋಪಿ ಕುಮಟಾಕ್ಕೆ ಬಂದಿಲ್ಲ ಎಂದರೆ ಸರಿ . ಆರೋಪಿ ಹೇಗೆ ಪರಿಚಯವಿದ್ದಾರೆ ನನ್ನ ಫಿರ್ಯಾದಿಯಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಆರೋಪಿ ನಮ್ಮ ಮನೆ ಹತ್ತಿರ ಬಾಡಿಗೆಗೆ ಇದ್ದರು ಆ ಸಮಯದಲ್ಲಿ ಪರಿಚಯ ಎಂದು ನುಡಿದಿರುತ್ತಾರೆ. ಮುಸ್ಲಿಂ ಜನಾಂಗದಲ್ಲಿ ಹೆಣ್ಣು ಮಕ್ಕಳು ಮನೆಯಿಂದ ಹೊರಗೆ ಬರುವುದಿಲ್ಲ ಹಾಗೂ ಗಂಡು ಮಕ್ಕಳಿಗೆ ಮುಖ ತೋರಿಸುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮುಸ್ಲಿಂ ಜನಾಂಗದಲ್ಲಿ ಮನೆಯ ಎಲ್ಲಾ ವ್ಯವಹಾರವನ್ನು ಪುರುಷರೇ ಮಾಡುತ್ತಾರೆ ಎಂದರೆ ಸರಿಯಲ್ಲ. ಸುಮಾರು ಎರಡು ಮೂರು ವರ್ಷ ನಮ್ಮ ಮನೆಯ ಹತ್ತಿರ ಬಾಡಿಗೆಗೆ ಇದ್ದರು. ನಮ್ಮ ಮನೆಯಿಂದ 500-600 ಮೀಟರ್ ದೂರದಲ್ಲಿ ಆರೋಪಿಯ ಮನೆ ಇತ್ತು . ಆರೋಪಿಗೆ ಎಷ್ಟು ಜನ ಗಂಡು ಮಕ್ಕಳಿದ್ದಾರೆ ಗೊತ್ತಿಲ್ಲ ಆದರೆ 20 ವರ್ಷದ ಮೇಲ್ಪಟ್ಟರು ಇದ್ದಾರೆ . ಅವರು

ಆಟೋ ಚಾಲನೆ ಮಾಡುತ್ತಾರೆ. ಆರೋಪಿಯ ಗಂಡ ಹಣ್ಣಿನ ವ್ಯಾಪಾರ ಮಾಡುತ್ತಾರೆ. ಅವರು ದುಡಿದು ಜೀವನ ಮಾಡುವಷ್ಟು ಅವರಿಗೆ ಆದಾಯವಿದೆ ಎಂದರೆ ಸರಿ . ಆರೋಪಿಯ ಪರಿಚಯ ಹೇಗಾಯಿತು ಫಿರ್ಯಾದಿಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಹೇಗೆ ಪರಿಚಯ ಆಯಿತು ಎಂದು ಫಿರ್ಯಾದಿಯಲ್ಲಿ ಬರೆದಿಲ್ಲ ಎಂದರೆ ಸರಿ . ಆರೋಪಿ ಜನೇವರಿ 2019 ರಲ್ಲಿ ಗಂಡನಿಗೋ ಮಗನಿಗೋ ಆರಾಮವಿಲ್ಲ ಎಂದು ಸಾಗರದಲ್ಲಿರುವ ನಮ್ಮ ಮನೆಗೆ ಬಂದಿದ್ದರು. ಸಮಾರು ಮಧ್ಯಾಹ್ನ 12 ರಿಂದ 12-30 ಗಂಟೆಗೆ ಬಂದಿದ್ದರು. ದಿನಾಂಕ ಹಾಗೂ ಸಮಯ ಫಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ . ಯಾವ ಸ್ಥಳದಲ್ಲಿ ಹಣ ಕೇಳಿದರು ಫಿರ್ಯಾದಿನಲ್ಲಿ ಬರೆದಿಲ್ಲ ಎಂದರೆ ಸಾಕ್ಷಿ ಮನೆಯ ಹತ್ತಿರ ಬಂದು ಹಣ ಕೇಳಿದ್ದರು ಎಂದು ನುಡಿದಿರುತ್ತಾರೆ. ನಾನು ಹೇಳುವ ಮನೆ ಸಾಗರದಲ್ಲಿ ಜೆಪಿ ನಗರದಲ್ಲಿರುವಾಗ ಬಂದು ಕೇಳಿದ್ದರು. ನನ್ನ ಬಳಿ ಅಷ್ಟು ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸರಿ . ನಾನು ಹಣ ಕೊಟ್ಟದ್ದು ಸಾಗರದ ಜೆಪಿ ನಗರದ ಬಾಡಿಗೆ ಮನೆಯಲ್ಲಿ . ನಾನು ಹಣ ಕೊಟ್ಟಿದ್ದೇನೆ ಎಂದು ಹೇಳಲು ಸಾಕ್ಷದಾರರು ಇಲ್ಲ ಎಂದರೆ ಸರಿ . ಆ ಸಮಯಲ್ಲಿ ಮನೆಯಲ್ಲಿ ಯಾರು ಇರಲಿಲ್ಲ ಕಾರಣ ಹಣ ಕೇಳಿದ ಬಗ್ಗೆಯೂ ಕೂಡ ಸಾಕ್ಷಿದಾರರು ಇಲ್ಲ. ಆರೋಪಿ ಅವರ ಗಂಡ , ಮಗ ನಿಗೆ ಆರಾಮವಿಲ್ಲದ ಬಗ್ಗೆ ಯಾವುದೇ ದಾಖಲಾತಿ ತೋರಿಸಿಲ್ಲ. ಅವರು ದಾಖಲಾತಿಯನ್ನು ತೋರಿಸಿಲ್ಲ , ಅಳುತ್ತಾ ಮನೆಯ ಹತ್ತಿರ ಬಂದಿದ್ದರು ಕಾರಣ ಹಣ ಕೊಟ್ಟಿದ್ದೇನೆ . ಆ ರೀತಿ ಅಳುತ್ತಾ ಬಂದರೆ ನಾನು ಯಾರಿಗಾದರೂ ಹಣ ಕೊಡುವುದಿಲ್ಲ. ಗಂಡನಿಗೆ ಆರಾಮವಿಲ್ಲ ಎಂದು ಹೇಳಿದ್ದರಿಂದ ಹಣ ಕೊಟ್ಟಿದ್ದೆ. ಅವರ ಗಂಡನನ್ನು ಆಸ್ಪತ್ರೆಗೆ ಹೋಗಿ ನಾನು ಹುಷಾರಿಲ್ಲದ ಬಗ್ಗೆ ತಿಳಿದುಕೊಂಡಿಲ್ಲ . ಯಾವ ಆಸ್ಪತ್ರೆಯಲ್ಲಿದ್ದರು ನಾನು ಹೋಗಿ ನೋಡಿಲ್ಲ. ಹಣ ಕೊಟ್ಟ ನಂತರ ಭದ್ರತೆಗಾಗಿ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ. ಅವರು ಕಷ್ಟ ಎಂದು ಬಂದಿದ್ದರಿಂದ ಅವರಿಂದ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ . ಬಾಂಡ್ ಕರಾರು ಮಾಡಿಕೊಂಡಿಲ್ಲ. 1,10,000/- ರೂಪಾಯಿ ಇದು ದೊಡ್ಡ ಮೊತ್ತ. ಆರೋಪಿಗೂ ಕೂಡ ಅದು ದೊಡ್ಡ ಮೊತ್ತ ಎಂದರೆ ಗೊತ್ತಿಲ್ಲ . ಆರೋಪಿಯಿಂದ ಅವರ ಮನೆ ಇಂತಹ ಕಡೆಗೆ ಇದೆ ಹಾಗೂ ಅವರ ಗುರುತಿನ

ಬಗ್ಗೆ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ . ಕಷ್ಟ ಎಂದು ಬಂದಿದ್ದರಿಂದ ನಾನು ಹಣವನ್ನು ಅವರಿಗೆ ಯಾವುದೇ ಸಾಕ್ಷಿದಾರರ ಮುಂದೆ ಕೊಟ್ಟಿಲ್ಲ. ಆ ದಿನ ನನ್ನ ಹತ್ತಿರ ಅಷ್ಟು ಹಣ ಇತ್ತು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ , ಆದರೆ ನನ್ನ ಮದುವೆಗೆ ಎಂದು ತಂದಿರುವ ಹಣ ನನ್ನ ಬಳಿ ಇತ್ತು . ಹಣವನ್ನು ಎಲ್ಲಿಂದ ತಂದದ್ದು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಬ್ಯಾಂಕನಿಂದ ತಂದು ಮನೆಯಲ್ಲಿ ಇಟ್ಟಿದ್ದೆ , ಆ ಹಣವನ್ನು ಅವರಿಗೆ ಕೊಟ್ಟಿದ್ದೆ ಎಂದು ನುಡಿದಿರುತ್ತಾರೆ . ಬ್ಯಾಂಕನಿಂದ ಹಣ ತಂದ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . 5-6 ತಿಂಗಳು ಬಿಟ್ಟು ಹಣವನ್ನು ವಾಪಸ್ಸು ಕೊಡುತ್ತೇನೆ ಎಂದು ಆರೋಪಿ ಹೇಳಿದ್ದರು . ಹಣವನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿದ ಬಗ್ಗೆ ಯಾವುದೇ ದಾಖಲಾತಿ ಮಾಡಿಕೊಂಡಿಲ್ಲ . ಆರೋಪಿ ಹಣವನ್ನು ಯಾವ ರೀತಿ ಖರ್ಚು ಮಾಡಿದರು ನಾನು ನೋಡಿಲ್ಲ . ಯಾವುದಕ್ಕಾಗಿ ಉಪಯೋಗಿಸಿಕೊಂಡರು ನನಗೆ ಗೊತ್ತಿಲ್ಲ . ನಾನು ಹಣವನ್ನು ವಾಪಸ್ಸು ಕೇಳಿದ ನಂತರ ಈ ಡೇಟಿಗೆ ಹಾಕಿ ಎಂದು ದಿನಾಂಕ ಬರೆದು ಚೆಕ್ ನ್ನು ಕೊಟ್ಟರು. ನಾನು ಅವರ ಮನೆಯ ಬಳಿ ಹೋಗಿ ಹಣವನ್ನು ಕೇಳಿದ್ದೆ . ನಾನು ಅವರು ಸಿಕ್ಕಾಗಲೆಲ್ಲಾ ಹಣವನ್ನು ಕೇಳಿದ್ದೇನೆ. 5-6 ತಿಂಗಳ ನಂತರ ಹಣವನ್ನು ಕೇಳಿದಾಗ ದಿನಾಂಕ ನಮೂದಿಸಿ ಆರೋಪಿ ತಮ್ಮ ಮನೆಯ ಬಳಿ ನನಗೆ ಚೆಕ್ ನ್ನು ಕೊಟ್ಟಿದ್ದರು . ಚೆಕ್ ನಲ್ಲಿ ನಮೂದಿಸಿದ ದಿನಾಂಕ ನೆನಪಿಲ್ಲ. 1,10,000/- ರೂಪಾಯಿಗೆ ಚೆಕ್ ನ್ನು ಕೊಟ್ಟಿದ್ದಾರೆ . ಚೆಕ್ ನಲ್ಲಿರುವ ಬರವಣಿಗೆ ಯಾರು ಮಾಡಿಕೊಟ್ಟರು ಎಂದರೆ ಸಾಕ್ಷಿ ಅವರೇ ಬರೆದುಕೊಂಡು ಬಂದಿದ್ದರು ಎಂದು ನುಡಿದಿರುತ್ತಾರೆ . ಯಾರ ಹತ್ತಿರ ಬರೆಸಿಕೊಂಡು ಬಂದಿದ್ದರು ಗೊತ್ತಿಲ್ಲ . ಚೆಕ್ ನ್ನು ಯಾರು ಬರೆದಿದ್ದಾರೆ ಗೊತ್ತಿಲ್ಲ , ಆದರೆ ನನ್ನ ಮುಂದೆ ಆರೋಪಿ ಸಹಿ ಮಾತ್ರ ಹಾಕಿ ಕೊಟ್ಟರು . ಆರೋಪಿ ಎಷ್ಟು ಓದಿದ್ದಾರೆ ಗೊತ್ತಿಲ್ಲ . ಅವರು ಕನ್ನಡದಲ್ಲೇ ಸಹಿ ಮಾಡಿದ್ದರಿಂದ ಕನ್ನಡ ಓದಲು ಬರೆಯಲು ಬರುತ್ತಿರಬಹುದು . ಚೆಕ್ ನಲ್ಲಿರುವ ಬರವಣಿಗೆ ಆಂಗ್ಲ ಭಾಷೆಯಲ್ಲಿದೆ ಎಂದರೆ ಸಾಕ್ಷಿ ತುಂಬಾ ದಿನ ಆಯಿತು ನೆನಪಿಲ್ಲ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ.

ಪಿಡಬ್ಲೂಃ 1

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.